# IV Semester B.B.A. Examination, May/June 2018
## (Fresh and Repeaters) (CBCS) (2015-16 and Onwards)
## ಕನ್ನಡ ಭಾಷಾ ಪತ್ರಿಕೆ – IV
## ಸುವರ್ಣಸಂಪದ ಮತ್ತು ದಾಳ

Time : 3 Hours Max. Marks : 70

I. ಅ) ಒಂದು ಪದ್ಯದ ಭಾವಾರ್ಥ ಬರೆಯಿರಿ : (1×6=6)

1) ಮನದೊಳೆಣಿಸಿದೆನಾದೊಡೆ ಕನಸಿನೊಳೊಮ್ಮೆ
ನೆನೆದೆನಾದೊಡೆ ಪರವೆಣ್ಣ
ಜನನಿ ನಿನಗೆ ಕಂಪಿಲಜನಪತಿಗಾನು
ಜನಿಸಿದವನೇ ಜಾರಜನು

2) ಎಲ್ಲ ನವಧಾನ್ಯದಲಿ ಈತನೆ
ಬಲ್ಲಿದನು ಹುಸಿಯಲ್ಲ ಬಡವರ
ಬಲ್ಲಿದರನಾರೈದು ಸಲಹುವನಿವಗೆ ಸರಿಯುಂಟೆ
ನೆಲ್ಲಿನಲಿ ಗುಣವೇನು ಭಾಗ್ಯದಿ
ಬಲ್ಲಿದರ ಪತಿಕರಿಸುವನು ಅವ
ನಲ್ಲಿ ಸಾರವ ಕಾಣೆಯೆಂದನು ಕಪಿಲ ಮುನಿ ನಗುತ

ಆ) ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ : (2×2=4)

1) ಗೋಪಾಲದಾಸರು
2) ಸಾಂಗತ್ಯ
3) ಕೀರ್ತನೆ
4) ನಾಗವರ್ಮ

ಇ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : (1×10=10)

1) ವೈಶಂಪಾಯನ ಗಿಳಿಯ ಬಾಲ್ಯಜೀವನದ ದುರಂತವನ್ನು ಕುರಿತು ಬರೆಯಿರಿ.
2) ಪುರಂದರದಾಸರು ರೊಕ್ಕದ ಮಹಿಮೆಯನ್ನು ಹೇಗೆ ವಿವರಿಸಿದ್ದಾರೆ ?

II. ಅ) ಎರಡು ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : (2×5=10)

1) ಸೂಫಿ ಕವಿಯತ್ರಿ ರಾಬಿಯಾಳನ್ನು ನಾಟಕದಲ್ಲಿ ತರುವ ಔಚಿತ್ಯ.

2) ಸಂಧಾನಕ್ಕೆ ಬಂದಿರುವ ಕೃಷ್ಣನ ಕುರಿತು ಸಿರಿಯಜ್ಜ ಹಾಗೂ ಭಾನುಮತಿಯರ ಅಭಿಪ್ರಾಯ.

3) ಸತ್ಯಂತಪ ಮುನಿಗಳ ಆಶ್ರಮದಲ್ಲಿ ನಡೆದ ಘಟನೆ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : (1×10=10)

1) ಪಂಪನ ನೆತ್ತಮನಾಡಿ ಪ್ರಸಂಗ 'ದಾಳ' ನಾಟಕದ ವಸ್ತುವಾಗಿದೆ. ವಿಶ್ಲೇಷಿಸಿ.

2) ಅಕರಾಳ-ವಿಕರಾಳ, ಕರ್ಣ, ಕೃಷ್ಣ-ಇವುಗಳಲ್ಲಿ ಇಬ್ಬರ ಪಾತ್ರಗಳನ್ನು ಪರಿಚಯಿಸಿ.

III. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : (1×5=5)

1) ಡಿಜಿಟಲ್ ಯುಗದಲ್ಲಿ ಕನ್ನಡ ಜಗತ್ತು ಎದುರಿಸುತ್ತಿರುವ ಹೊಸ ಸವಾಲುಗಳು.

2) ಕೈಗಾರಿಕಾ ಕ್ರಾಂತಿಯು ಸಾಂಪ್ರದಾಯಿಕ ಕರಕುಶಲ ಕಲೆಗಳ ಮೇಲೆ ಬೀರಿದ ಪ್ರಭಾವ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : (1×10=10)

1) ಬಾನುಲಿ ಇದರ ಉದ್ದೇಶ, ವ್ಯಾಪ್ತಿ ಹಾಗೂ ಜನರ ಜೀವನದಲ್ಲಿ ವಹಿಸಿರುವ ಪಾತ್ರವನ್ನು ಕುರಿತು ಬರೆಯಿರಿ.

2) 'ಡಿಜಿಟಲ್ ನವೋದಯ'ವನ್ನು ಕುರಿತು ಬರೆಯಿರಿ.

IV. ಅ) ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರ ಬರೆಯಿರಿ : (1×5=5)

1) ವಾಣಿಜ್ಯೋದ್ಯಮಗಳಲ್ಲಿ ತಂತ್ರಜ್ಞಾನದ ಬಳಕೆ.

2) ಸಮೂಹ ಸಂವಹನದ ಲಕ್ಷಣ ಮತ್ತು ಸ್ವರೂಪ.

ಆ) ಒಂದು ಪ್ರಶ್ನೆಗೆ ವಿವರವಾಗಿ ಉತ್ತರ ಬರೆಯಿರಿ : (1×10=10)

1) ಜಾಹೀರಾತಿನ ಉದ್ಯಮ ಅತ್ಯಂತ ಅಭದ್ರ ಉದ್ಯಮವಾಗಿರಲು ಕಾರಣವೇನು ? ಸ್ಪಷ್ಟಪಡಿಸಿ.

2) 'ಅಂತರ್ಜಾಲ ಮಾಯಾಬಜಾರ್' ಲೇಖನದ ಸ್ವರೂಪವೇನು ? ಪರಿಚಯಿಸಿ.

---